ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳಿಸಿಕೊಟ್ಟಿದ್ದರು. ಅದಕ್ಕೆ ನಾನು ಉತ್ತರವನ್ನು ಕಳಿಸಿಕೊಟ್ಟಿದ್ದೆ. ಆದರೆ ಇಲ್ಲಿ ಬಿಸಿನೆಸ್ ಜಾಸ್ತಿ ಇದ್ದದ್ದರಿಂದ ಅದು ಚರ್ಚೆಗೆ ಬರಲಿಲ್ಲ. ಆದರೆ ಅವರೇನು ಪ್ರಸ್ತಾಪ ಮಾಡಿದ್ದಾರೆ ಅದು ನಿಜ. ಇದಕ್ಕೆ ಸರ್ಕಾರ ತಡೆಯಾಜ್ಞೆ ಕೊಟ್ಟಿದ್ದು ನಿಜ. ಹಿಂದಿನ ಸರ್ಕಾರ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದೂ ನಿಜ. ಆದರೆ ಕೆಲವು ಸಂದರ್ಭಗಳಲ್ಲಿ ಜವಾಬ್ದಾರಿಯುತ ವ್ಯಕ್ತಿಗಳು ಬಂದು ಹಲವಾರು ವಿಚಾರಗಳನ್ನು ಹೇಳಿದಾಗ ಅದರ ಬಗ್ಗೆ ನಾವು ಗಮನವನ್ನು ಹರಿಸಬೇಕಾಗುತ್ತದೆ. ಇನ್ನೊಂದು ವಾರದಲ್ಲಿ ಅದರ ಬಗ್ಗೆ ಏನಾದರೂ ಸೂಕ್ತವಾದ ಪರಿಹಾರದ ವ್ಯವಸ್ಥೆಯನ್ನು ಮಾಡುತ್ತೇನೆಂದು ಭರವಸೆಯನ್ನು ನೀಡುತ್ತೇನೆ.

ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ

(ಅ) ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ, 2000

ಅಧ್ಯಕ್ಷರು: ಗೃಹ ಸಚಿವರೇ, ವಿಧೇಯಕವನ್ನು ಪರ್ಯಾಲೋಚನೆಗೆ ಮಂಡಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):- ಅಧ್ಯಕ್ಷರೇ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ 2000ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಈಗಾಗಲೇ ನಾನು ಕೇಳಿಕೊಂಡಿದ್ದೇನೆ. ನಾವು ಇದನ್ನು ಹೊಸದಾಗಿ ತಂದದ್ದೇನಲ್ಲ. ಮಾನ್ಯ ಸಿಂಧ್ಯರವರ ಸರ್ಕಾರವಿದ್ದಾಗ ಮಹಾರಾಷ್ಟ್ರದ ಮಾದರಿಯಲ್ಲಿ ತಯಾರು ಮಾಡಿದಂಥ ಕಾನೂನು. ಇದನ್ನು ಕಾನೂನು ಇಲಾಖೆ ಮತ್ತು ಇತರ ಇಲಾಖೆಗಳು ಪರಿಶೀಲನೆ ಮಾಡಿ ಅದನ್ನು ಕಾನೂನಿನ ರೂಪದಲ್ಲಿ ತರತಕ್ಕ ವ್ಯವಸ್ಥೆಯಾಗಬೇಕಾಗಿತ್ತು. ಆರ್ಗನೈಸ್ಡ್ ಕ್ರೈಮ್ಸ್‌ಗಳಾದ ಗ್ಯಾಂಗ್‌ವಾರ್ಸ್, ಆ್ಯಂಟಿಸೋಷಿಯಲ್ ಎಲಿಮೆಂಟ್ಸ್ ಗಳಲ್ಲಿ ತೊಡಗಿರುವವರಿಗೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳಬೇಕೆಂದರೆ ಇಂಡಿಯನ್ ಪೀನಲ್ ಕೋಡ್‌ನಲ್ಲಾಗಲಿ, ಪೋಲೀಸ್ ಆಕ್ಟ್ ನಲ್ಲಾಗಲಿ, ಬೇರೆ ಕಾನೂನಿನಲ್ಲಾಗಲಿ ವ್ಯವಸ್ಥೆ ಇಲ್ಲ. ಆದ್ದರಿಂದ ಇದಕ್ಕಾಗಿ ವಿಶೇಷವಾದ ಕಾನೂನು, ವಿಶೇಷವಾದ ಕೋರ್ಟ್, ವಿಶೇಷವಾದ ಪ್ರಾಸಿಕ್ಯೂಟರ್, ಶಿಕ್ಷೆ ವಿಧಿಸತಕ್ಕ ವ್ಯವಸ್ಥೆ ಸಹ ಬೇರೆ ಈ ರೀತಿಯಾಗಿ ಈ ಕಾನೂನನ್ನು ತಂದಿದ್ದೇವೆ. ಎರಡು ವರ್ಷಗಳ ಹಿಂದೆ ಇದನ್ನು ಮಹಾರಾಷ್ಟ್ರದಲ್ಲಿ ಜಾರಿಗೆ ತಂದಿದ್ದಾರೆ. ಇಲ್ಲಿ ಇದು ಪಾಸ್ ಆದ ಮೇಲೆ ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಕೇಂದ್ರ ಸರ್ಕಾರದ ಅಪ್ರೂವಲ್ ಇಲ್ಲದೆಯೇ ನಾವು

ಇದನ್ನು ಮಾಡಲು ಆಗುವುದಿಲ್ಲ. ಬಹುಶಃ ಕೇಂದ್ರ ಸರ್ಕಾರದವರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆ. ಆರ್ಗನೈಸ್ಡ್ ಕ್ರೈಮ್‌ಗಳನ್ನೇನು ಮಾಡುತ್ತಾರೆ ಅವರನ್ನು ಹಿಡಿತದಲ್ಲಿಡಲು, ಕ್ರಮತೆಗೆದುಕೊಳ್ಳಲು ಇದು ಅವಶ್ಯಕವೆಂದು ಕಂಡುಬಂದಿದ್ದರಿಂದ ಇವತ್ತು ಇದನ್ನು ಸದನದ ಮುಂದೆ ಮಂಡಿಸಿದ್ದೇವೆ. ದಯವಿಟ್ಟು ಇದನ್ನು ಪಾಸ್ ಮಾಡಿಕೊಡಬೇಕಾಗಿ ಪ್ರಾರ್ಥನೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಇದರ ಉದ್ದೇಶ ಬಹಳ ಒಳ್ಳೆಯದಾಗಿದೆ. ಆದರೆ ಇದರದ್ದು ಬಹಳ ಫಾರ್ ರೀಜ್. ನಾವೂ ಕೂಡ ಈ ಬಗ್ಗೆ ಅಧ್ಯಾಯನ ಮಾಡಿಕೊಂಡು ಮಾತನಾಡಬೇಕಾಗುತ್ತದೆ. ನಿನ್ನೆ ಇಲ್ಲಿ ಮಾತನಾಡಿದ್ದ ಪ್ರಕಾರ ಇದನ್ನು ಸೇರಿಸಿರಲಿಲ್ಲ. ಮಾತನಾಡಲೇಬೇಕು ಎಂದರೆ ಮಾತನಾಡೋಣ, ಚರ್ಚೆ ಮಾಡೋಣ.

ಶ್ರೀ ಜಗದೀಶಶೆಟ್ಟರ್ :- (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದರ ಉದ್ದೇಶ ಒಳ್ಳೆಯದಾಗಿದೆ, ಆದರೆ ಮೊನ್ನೆ ನಡೆದಂಥ ಬಿ. ಎಸ್.ಸಿ. ಸಭೆಯಲ್ಲಿ ಯಾವ್ಯಾವುದು ಆರ್ಡಿನೆನ್ಸ್ ಆಗಿದೆ ಅಂದರೆ ವಿಶ್ವವಿದ್ಯಾನಿಲಯದ ಬಿಲ್ ಗ್ರಾಮೀಣ ಕೃಪಾಂಕದ ಬಿಲ್ ಇವುಗಳನ್ನು ಪಾಸ್ ಮಾಡಿಕೊಡಬೇಕೆಂದು ಒಪ್ಪಂದವಾಗಿತ್ತು. ಆ ದೃಷ್ಟಿಯಿಂದ ನಾವು ಇತರ ಬಿಲ್ಲುಗಳ ಬಗ್ಗೆ ಕಾನ್‌ಸೆನ್‌ಟ್ರೇಟ್ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ :- ಮಾನ್ಯ ಅಧ್ಯಕ್ಷರೆ, ಆರ್ಗನೈಸ್ಡ್ ಆಗಿ ಕ್ರೈಮ್ ಮಾಡುವವರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಎಂಬ ಉದ್ದೇಶದಿಂದ ಇದನ್ನು ನಾವು ತಂದಿದ್ದೇವೆ, ಇದನ್ನು ತರುವಲ್ಲಿ ಎಷ್ಟು ವಿಳಂಬವಾಗುತ್ತದೆ ಅಷ್ಟೇ ನಮಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ನಾನೇನು ತರಾತುರಿಯಲ್ಲಿಲ್ಲ. ತಾವು ಬೇಗನೆ ಪಾಸ್ ಮಾಡಿಕೊಟ್ಟರೆ ಇದನ್ನು ಜಾರಿಗೆ ತರಲು ಅನುಕೂಲವಾಗುತ್ತದೆ. ಆರ್ಗನೈಸ್ಡ್ ಗ್ಯಾಂಗ್ ಮಾಡಿಕೊಂಡು ಭೂಮಿಯನ್ನು ಕಬಳಿಸತಕ್ಕದ್ದು, ಇಲ್ಲಿ ಕ್ರೈಮ್ ಮಾಡಿ ಮತ್ತೊಂದು ರಾಜ್ಯಕ್ಕೆ ಓಡಿಹೋಗುವುದು ಆ ರಾಜ್ಯದವರು ಬಂದು ಇಲ್ಲಿ ಇದ್ದುಬಿಡುವುದು ಇಂಥವರ ಬಗ್ಗೆ ಹಾಲಿ ಇರುವ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಕ್ರಮ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿಯ ಮೇಲೆ ನಮಗೆ ಸಂಶಯ ಬಂದು ಇಂಥ ಕ್ರಿಮಿನಲ್ ಆಕ್ಟ್ಸ್ ಮಾಡಿದ್ದಾನೆಂದು ಪೋಲೀಸ್ ಠಾಣೆಯಲ್ಲಿ ಕೇಸನ್ನು ಹಾಕಿ ಎಫ್. ಐ. ಆರ್. ಹಾಕಿದರೆ ಅದರ ಮೇಲೆ ಅವನು ತಕ್ಷಣವೇ ಸ್ಟೇ ಪಡೆದುಕೊಂಡು ಬರುತ್ತಾನೆ. ಇಂಥವರನ್ನು ಕಂಟ್ರೋಲ್ ಮಾಡಬೇಕೆಂದು ಮಹಾರಾಷ್ಟ್ರ ಮಾದರಿಯಲ್ಲಿ ನಾವು ಈ ಕಾನೂನನ್ನು ತಂದಿದ್ದೇವೆ. ಇದನ್ನು ಪಾಸ್ ಮಾಡುವಲ್ಲಿ ವಿಳಂಬವಾದಷ್ಟು ನಮಗೆ ಅನಾನುಕೂಲವಾಗುತ್ತದೆಯೇ ಹೊರತು ಅನುಕೂಲವಾಗುವುದಿಲ್ಲ.

ಶ್ರೀ ಡಿ. ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರುವ ಬಿಲ್ಲನ್ನು ನಿಜವಾಗಿಯೂ ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ಎರಡು ಮೂರು ಸೆಕ್ಷನ್‌ಗಳು ಅದೂ ಕೂಡ ಎಲೆಕ್ಟ್ರಾನಿಕ್ ವಸ್ತುಗಳು, ಕಮ್ಯುನಿಕೇಷನ್ ಬಗ್ಗೆ ಡೀಲ್ ಮಾಡುವುದರಲ್ಲಿ ವಿಚಾರವನ್ನು ನಮೂದಿಸಿದ್ದೀರಿ. ಇವತ್ತು ಸಾಮಾನ್ಯ ಮನುಷ್ಯರು ಸಹ ಮೊಬೈಲ್

ಫೋನ್ ಉಪಯೋಗ ಮಾಡುತ್ತಾರೆ. ಅದರ ರಿಸ್ಟ್ರಿಕ್ಷನ್ ಬಗ್ಗೆ ತಾವು ನಮೂದು ಮಾಡಿದ್ದೀರಿ. ಇದು ಸ್ವಾಗತ ಇವತ್ತು ಯಾರು ಎಲ್ಲಿಂದ ದೂರವಾಣಿ ಮಾಡುತ್ತಾರೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ನೂರಕ್ಕೆ ನೂರು ಭಾಗ ಸ್ವಾಗತ ಮಾಡಲೇಬೇಕು. ಆದ್ದರಿಂದ ಮಧ್ಯಾಹ್ನ ಇದರ ಬಗ್ಗೆ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು. ಅಷ್ಟರಲ್ಲಿ ನಾವು ಇದರ ಬಗ್ಗೆ ಸ್ವಲ್ಪ ಅಧ್ಯಾಯನ ಮಾಡಲು ಸಾಧ್ಯವಾಗುತ್ತದೆ. ಖಂಡಿತವಾಗಿ ನಾವು ಇದನ್ನು ಪಾಸ್ ಮಾಡಿಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಕ್ರೈಮ್ ಮಾಡತಕ್ಕವನು, ಟೆಲಿಫೋನ್ ಟ್ರಾಪ್ ಮಾಡತಕ್ಕವನು ಇವರ ಬಗ್ಗೆ ಕ್ರಮ ತೆಗೆದುಕೊಳ್ಳುವ ಸಲುವಾಗಿಯೇ ಇದು ಭಾರತ ಸರ್ಕಾರಕ್ಕೆ ಹೋಗಬೇಕಾಗಿದೆ. ತಾವು ಇದನ್ನು ಪಾಸ್ ಮಾಡಿಕೊಟ್ಟರೂ ಭಾರತ ಸರ್ಕಾರಕ್ಕೆ ಹೋಗಿ ಅಪ್ರೂವಲ್ ಆಗಿ ಬರಬೇಕಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಆ ಸೌಲಭ್ಯ ಇಲ್ಲದಿದ್ದರೆ ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್ ಗೊತ್ತಾಗುತ್ತಲೇ ಇರಲಿಲ್ಲ , ಚರ್ಚೆಗಳ ಸ್ಪೋಟ ಮಾಡಿದ ವ್ಯಕ್ತಿಗಳನ್ನು ಇದರಿಂದಲೇ ಹಿಡಿಯಲು ಸಾಧ್ಯವಾಯಿತು. ಆದರೆ ಕೆಲವು ಪ್ರಾವಿಜನ್‌ಗಳನ್ನು ನಾವು ನೋಡುವುದಕೋಸ್ಕರ ಅರ್ಧ ಗಂಟೆ ಅವಕಾಶ ಕೊಡಿ ನಾವು ಪರಿಶೀಲನೆ ಮಾಡುತ್ತೇವೆ. ಊಟದ ನಂತರ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಇದ್ದಾರೆ. ಚಿತ್ರದುರ್ಗದಲ್ಲಿ ಹರಿಜನ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿರುವ ಬಗ್ಗೆ ಹೇಳಿಕೆ ಕೊಡುವುದಾಗಿ ಹೇಳಿದ್ದರು. ಮೂರು ದಿವಸಗಳಿಂದ ಹೇಳಿಕೆ ಕೊಡಲು ಆಗಿಲ್ಲ. ಆದ್ದರಿಂದ ಮೊದಲು ಹೇಳಿಕೆಯನ್ನು ಕೊಡಲಿ. ಆನಂತರ ಮಾನ್ಯ ಶ್ರೀಕಂಠಯ್ಯನವರ ಬಿಲ್ಲನ್ನು ತೆಗೆದುಕೊಳ್ಳಿ.

(ಆ) ಕರ್ನಾಟಕ ಬಾಡಿಗೆ ವಿಧೇಯಕ, 1999

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ "1999ರ ಕರ್ನಾಟಕ ಬಾಡಿಗೆ ವಿಧೇಯಕವನ್ನು" ಪರ್ಯಾಲೋಪಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಗದೀಶ್‌ಶೆಟ್ಟರ್ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, 1961ರ ಬಾಡಿಗೆ ನಿಯಂತ್ರಣ ಆಕ್ಟ್ ಏನಿತ್ತೋ ಅದಕ್ಕೆ ಪೂರಕವಾಗಿ ಹೊಸದಾಗಿ ಈ ಆಕ್ಟ್‌ನ್ನು ತಂದಿದ್ದಾರೆ. ಇದು ನಿನ್ನೆ ವಿಧಾನಪರಿಷತ್ತಿನಲ್ಲಿ ಪಾಸ್ ಆಗಿದೆ. ಬಿ.ಎಸ್.ಪಿ. ಸಭೆಯಲ್ಲಿ ನಾನು ಇದನ್ನು ಬೇಗನೆ ತನ್ನಿ ಏಕೆಂದರೆ 2001ಕ್ಕೆ ಇದರ ಅವಧಿ ಮುಗಿಯುತ್ತದೆಂದು ಹೇಳಿದ್ದೆ. ಆದ್ದರಿಂದ